# Revenue Management Information System

ಕಂದಾಯ ಇಲಾಖೆಯ ವಿವಿಧ ಪ್ರಗತಿ ವರದಿಗಳನ್ನು ನಿಗಧಿತ ನಮೂನೆಯಲ್ಲಿ ಸರ್ಕಾರಕ್ಕೆ ಪ್ರತಿ ಮಾಹೆ ಕಳುಹಿಸಬೇಕಾಗಿರುತ್ತದೆ. ಈಗ ಬಹುತೇಕ ಪ್ರಗತಿ ವರದಿಗಳನ್ನು ಪತ್ರ ಹಾಗೂ ನಮೂನೆ ಗಳ ಮುಖೇನ ಪಡೆಯಲಾಗುತ್ತಿದ್ದು, ಇವುಗಳನ್ನು ಪ್ರತಿ ಹಂತದಲ್ಲಿ ಅಂದರೆ, ತಾಲ್ಲೂಕು, ಉಪವಿಭಾಗ, ಜಿಲ್ಲಾ ಮತ್ತು ವಿಭಾಗ ಮಟ್ಟದಲ್ಲಿ ಕ್ರೋಢೀಕರಿಸಿ ಸರ್ಕಾರಕ್ಕೆ ವರದಿಯನ್ನು ಪ್ರತಿ ಮಾಹೆ ಸಲ್ಲಿಸಬೇಕಾಗಿರುತ್ತದೆ. ಮೈಸೂರು ವಿಭಾಗದಲ್ಲಿ 8 ಜಿಲ್ಲಾಧಿಕಾರಿಗಳ ಕಛೇರಿ, 13 ಉಪವಿಭಾಗಾಧಿಕಾರಿಗಳ ಕಛೇರಿ, 44 ತಾಲ್ಲೂಕು ಕಛೇರಿ ಮತ್ತು 5 ವಿಶೇಷ ತಾಲ್ಲೂಕು ಕಛೇರಿಗಳಿಂದ ಮಾಹಿತಿಯನ್ನು ಸಂಗ್ರಹಿಸಲಾಗುತ್ತಿದ್ದು, ಇವುಗಳನ್ನು ತ್ವರಿತವಾಗಿ ಪಡೆಯುವ ಉದ್ದೇಶದಿಂದ web based online monitoring ವ್ಯವಸ್ಥೆಯನ್ನು ಕಲ್ಪಿಸಲು ಪ್ರಥಮ ಬಾರಿಗೆ ಮೈಸೂರು ಪ್ರಾದೇಶಿಕ ಆಯುಕ್ತರ ಕಛೇರಿಯಲ್ಲಿ ಸೆಪ್ಟೆಂಬರ್ 2008ರಲ್ಲಿ ಕಾರ್ಯಕ್ರಮವನ್ನು ರೂಪಿಸಲಾಗಿತ್ತು.

ವಿವಿಧ ಕಾನೂನು ಅಡಿಯಲ್ಲಿ ಹಾಗೂ ಯೋಜನೆಗಳ ಅಡಿಯಲ್ಲಿ ಕಂದಾಯ ಇಲಾಖೆಯಲ್ಲಿ ಸಾಧಿಸಿದ ಪ್ರಗತಿಯನ್ನು ತ್ವರಿತವಾಗಿ, ಸಮರ್ಪಕವಾಗಿ, ನಿಚ್ಚಳವಾಗಿ ಪಡೆಯುವ ಸದುದ್ದೇಶದಿಂದ ವೆಬ್ ಬೇಸ್‌ನ Revenue Management Information System ನ್ನು ಅಳವಡಿಸಲು ನಿರ್ಧರಿಸಲಾಯಿತು. ಕಂದಾಯ ಇಲಾಖೆಯಲ್ಲಿ ಭೂಮಿಗೆ ಸಂಬಂಧಪಡುವ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಕಾಯ್ದೆ ಹಾಗೂ ನಿಯಮಗ ಳಡಿ ಮತ್ತು ಸರ್ಕಾರದಿಂದ ರೂಪಿಸಲ್ಪಟ್ಟ ವಿವಿಧ ಯೋಜನೆ/ಕಾರ್ಯಕ್ರಮಗಳಡಿ ಸಾಧಿಸಿದ/ನಿರ್ವಹಿಸಿದ ಪ್ರಗತಿಯನ್ನು ಸರ್ಕಾರದ ಹಾಗೂ ವಿವಿಧ ಹಂತದ ಕಛೇರಿಗಳಲ್ಲಿ ವಿಮರ್ಶಿಸುವುದು ಅವಶ್ಯಕವಾಗಿರುತ್ತದೆ.

ವಿವಿಧ ಪ್ರಗತಿ ವರದಿಗಳನ್ನು ನಿಗದಿತ ನಮೂನೆಗಳಲ್ಲಿ ಸರ್ಕಾರಕ್ಕೆ ಪ್ರತಿ ಮಾಹೆ ಕಳುಹಿಸಬೇಕಾಗಿರುತ್ತದೆ. ಅಲ್ಲದೆ, ವಿಭಾಗ ಮಟ್ಟದಲ್ಲಿ ಕಂದಾಯ ಅಧಿಕಾರಿಗಳ ಸಭೆಯಲ್ಲಿ ಸಮೀಕ್ಷೆನಡೆಸುವ ವಿಷಯಗ ಳನ್ನು ಗಮನದಲ್ಲಿರಿಸಿ ಈ ಎಲ್ಲಾ ಮಾಹಿತಿಗಳನ್ನು ಕ್ರೋಢೀಕರಿಸಲು ನಮೂನೆಗಳನ್ನು standardised ಮಾಡುವುದು ಅತ್ಯವಶ್ಯಕವಾಗಿತ್ತು. ಅಗತ್ಯ ನಮೂನೆಗಳನ್ನು ತಯಾರಿಸುವ ವಿಚಾರದಲ್ಲಿ ಸೆಪ್ಟೆಂಬರ್ -08 ಮಾಹೆಯಲ್ಲಿ ಪ್ರಾದೇಶಿಕ ಆಯುಕ್ತರ ಕಚೇರಿಯ ಹೆಚ್ಚುವರಿ ಆಯುಕ್ತರುಗಳು, ತಹಶೀಲ್ದಾರ್‌ರುಗಳು ಹಾಗೂ ಶಾಖೆಗಳ ಎಲ್ಲಾ ಅಧೀಕ್ಷಕರುಗಳೊಡನೆ ಸುದೀರ್ಘವಾಗಿ 2-3 ಬಾರಿ ಸಭೆ ಸೇರಿ, ಚರ್ಚೆಗಳನ್ನು ನಡೆಸಿ ನಮೂನೆಗಳನ್ನು ತಯಾರಿಸಲಾಯಿತು.

RMIS ತಂತ್ರಾಂಶ ತಯಾರಿಸುವ ಹಾಗೂ ಅಳವಡಿಕೆ ಉಸ್ತುವಾರಿ ಮಾಡಲು ಪ್ರಾದೇಶಿಕ ಆಯುಕ್ತರ, ಕಚೇರಿಯ ಭೂ ನಿರ್ವಹಣೆ ಹಾಗೂ ಯೋಜನೆಗಳ ಹೆಚ್ಚುವರಿ ಆಯುಕ್ತರುರವರ ಅಧ್ಯಕ್ಷತೆಯಲ್ಲಿ ಮೈಸೂರು ಪ್ರಾದೇಶಿಕ ಆಯುಕ್ತರ ಕಚೇರಿಯ ಸಂ:ಇ ಆಡಳಿತ /ಸಿಆರ್/7/08-09 ದಿ:17-9-2008ರ ಆದೇಶದಂತೆ ಸಮಿತಿಯೊಂದನ್ನು ರಚಿಸಲಾಯಿತು.

# ಪ್ರಾದೇಶಿಕ ಆಯುಕ್ತರ ಕಛೇರಿ,ಮೈಸೂರು ವಿಭಾಗ,ಮೈಸೂರು.

ನಂ. ಇ.ಆಡಳಿತ.ಸಿಆರ್.7 /08-09

ದಿನಾಂಕ: 17.9.2008

## ಅಧಿಕೃತ ಜ್ಞಾಪನ

ವಿಷಯ: ರೆವಿನ್ಯೂ ಮ್ಯಾನೇಜ್‌ಮೆಂಟ್ ಇನ್ ಫರ್ಮೇಷನ್ ಸಿಸ್ಟಮ್ (ವೆಬ್ ಬೇಸ್) ಸಮರ್ಪಕವಾಗಿ ಅನುಷ್ಠಾನಗೊಳಿಸಲು ಸಮಿತಿ ರಚನೆ ಕುರಿತು

ರೆವಿನ್ಯೂ ಮ್ಯಾನೇಜ್‌ಮೆಂಟ್ ಇನ್ ಫರ್ಮೇಷನ್ ಸಿಸ್ಟಮ್ ಅನ್ನು ಅಳವಡಿಸಲು ನಿರ್ಧರಿಸಲಾಗಿದ್ದು ವಿವಿಧ ಕಾನುನು ಅಡಿಯಲ್ಲಿ ಹಾಗೂ ಯೋಜನೆಗಳ ಅಡಿಯಲ್ಲಿ ಕಂದಾಯ ಇಲಾಖೆಯಲ್ಲಿ ಸಾಧಿಸಿದ ಪ್ರಗತಿಯನ್ನು ತ್ವರಿತವಾಗಿ ಸಮರ್ಪಕವಾಗಿ,ನಿಚ್ಛಳವಾಗಿ ಪಡೆಯುವುದು ಅತ್ಯವಶ್ಯಕವಾಗಿರುತ್ತದೆ. ಎಲ್ಲ ಮಾಹಿತಿಗಳನ್ನು ಕ್ರೋಢೀಕರಿಸಲು ನಮೂನೆಗಳನ್ನು Standardised ಮಾಡುವುದು ಅತ್ಯವಶ್ಯಕವಿರುತ್ತದೆ. ನಮೂನೆಗಳನ್ನು ನಿಗಧಿಪಡಿಸಿದ ನಂತರ ತಂತ್ರಾಂಶದಲ್ಲಿ ಅಳವಡಿಸಿ ಮಾಹಿತಿಯನ್ನು ಸಂಗ್ರಹಿಸಬೇಕಾಗಿರುತ್ತದೆ. ಈ ದಿಸೆಯಲ್ಲಿ ಎಲ್ಲಾ ವಿಷಯದ ಕುರಿತು ನಮೂನೆಗಳನ್ನು ತಯಾರಿಸಲು ತಂತ್ರಾಂಶ ತಯಾರಿಸುವ ಹಾಗೂ ಅಳವಡಿಸುವ ಬಗ್ಗೆ ಉಸ್ತುವಾರಿ ಮಾಡಲು ಈ ಕಛೇರಿಯ ಭೂ ನಿರ್ವಹಣೆ ಹಾಗೂ ಯೋಜನೆಗಳ ಹೆಚ್ಚುವರಿ ಆಯುಕ್ತರ ಅಧ್ಯಕ್ಷತೆಯಲ್ಲಿ ಈ ಕೆಳಗೆ ನಮೂದಿಸಿರುವ ಅಧಿಕಾರಿ/ನೌಕರರನ್ನು ಒಳಗೊಂಡ ಸಮಿತಿ ರಚಿಸಲಾಗಿದೆ.

| ಕ್ರ. ಸಂ | ಅಧಿಕಾರಿಯ ಹುದ್ದೆ | |
|---|---|---|
| 1. | ಹೆಚ್ಚುವರಿ ಆಯುಕ್ತರು , ಭೂ ನಿರ್ವಹಣೆ ಹಾಗೂ ಯೋಜನೆಗಳು | ಅಧ್ಯಕ್ಷರು |
| 2. | ಉಪವಿಭಾಗಾಧಿಕಾರಿ, ಕುಂದಾಪುರ ಉಪವಿಭಾಗ, ಉಡುಪಿ ಜಿಲ್ಲೆ. | ಸದಸ್ಯರು |
| 3. | ಶ್ರೀ ದೇವರಾಜ್, ಡಿ.ಐ.ಒ. ಎನ್.ಐ.ಸಿ. ಮೈಸೂರು | ಸದಸ್ಯರು |
| 4 | ಶ್ರೀ ಪ್ರಶಾಂತ್ ಡಿ.ಐ.ಒ. ಎನ್.ಐ.ಸಿ. ಹಾಸನ | ಸದಸ್ಯರು |
| 5 | ತಹಶೀಲ್ದಾರ್, ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ | ಸದಸ್ಯರು |
| 6. | ತಹಶೀಲ್ದಾರ್, ಆಡಳಿತ, ಪ್ರಾದೇಶಿಕ ಆಯುಕ್ತರ ಕಛೇರಿ | ಸದಸ್ಯ ಕಾರ್ಯದರ್ಶಿ |
| 7 | ತಹಶೀಲ್ದಾರ್, ಕಂದಾಯ ಶಾಖೆ, ಪ್ರಾದೇಶಿಕ ಆಯುಕ್ತರ ಕಛೇರಿ | ಸದಸ್ಯರು |
| 8. | ತಹಶೀಲ್ದಾರ್, ಸಿ.ಸಿ.ಎ. ಶಾಖೆ. ಪ್ರಾದೇಶಿಕ ಆಯುಕ್ತರ ಕಛೇರಿ | ಸದಸ್ಯರು |
| 9. | ಕಂದಾಯ ಶಾಖೆಯ ಶಿರಸ್ತೇದಾರರು, ಜಿಲ್ಲಾಧಿಕಾರಿಗಳ ಕಛೇರಿ, ಮೈಸೂರು | ಸದಸ್ಯರು |
| 10. | ಅಧೀಕ್ಷಕರು (ಭೂ ಮಂಜೂರಾತಿ ಶಾಖೆ) ಪ್ರಾ. ಆಯುಕ್ತರ ಕಛೇರಿ | ಸದಸ್ಯರು |
| 11. | ಶ್ರೀ ವಿನೋದ್, ವಿಷಯ ನಿರ್ವಾಹಕರು, ಪ್ರಾದೇಶಿಕ ಆಯುಕ್ತರ ಕಛೇರಿ. | ಸದಸ್ಯರು |
| | | |

ಈ ಸಮಿತಿಯು ಸಭೆ ಸೇರಿ ತುರ್ತಾಗಿ Standardised ಎಲ್ಲಾ ವಿಷಯಗಳ ನಮೂನೆಗಳನ್ನು ತಯಾರಿಸಿ ಮಾನ್ಯ ಪ್ರಾದೇಶಿಕ ಆಯುಕ್ತರಿಗೆ ದಿನಾಂಕ 25.9.2008 ರೊಳಗೆ ಸಲ್ಲಿಸಲು ತಿಳಿಸಿದೆ ಹಾಗೂ ತಂತ್ರಾಂಶವನ್ನು ದಿ: 20-10-2008 ರೊಳಗೆ ಅಳವಡಿಸಲು ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ.

Jayanthi
ಪ್ರಾದೇಶಿಕ ಆಯುಕ್ತರು
ಮೈಸೂರು ವಿಭಾಗ, ಮೈಸೂರು

ಪ್ರತಿಯನ್ನು:
State Informatics Officer & Deputy Director General, NIC, Bangalore. ಇವರ ಅವಗಾಹನೆಗೆ ಹಾಗೂ ಮಾಹಿತಿಗಾಗಿ

ಈ ದಿಸೆಯಲ್ಲಿ ಎಲ್ಲಾ ವಿಷಯಗಳ ಕುರಿತು ನಮೂನೆಗಳ ಬಗ್ಗೆ ತಂತ್ರಾಂಶ ತಯಾರಿಸುವ ಹಾಗೂ online website ನಲ್ಲಿ ಅಳವಡಿಸುವ ಕಾರ್ಯವನ್ನು State Informatics Officer ನ್ಯಾಷನಲ್ ಇನ್‌ಫರ್‌ಮೆಟಿಕ್ ಸ್ಟೇಟ್ ಯೂನಿಟ್ ( NIC) , ಬೆಂಗಳೂರು ಇವರಿಗೆ ವಹಿಸಲಾಯಿತು. State Informatics Officer, N.I.Cರವರು ನಮೂನೆ ತಯಾರಿಕೆಯ ತಂತ್ರಾಂಶದ ಕೆಲಸವನ್ನು ಬೆಂಗಳೂರಿನ ರಾಜ್ಯ ಘಟಕದ ತಾಂತ್ರಿಕ ನಿರ್ದೇಶಕರಾದ ಶ್ರೀ. ಮೋಹನ್ ದಾಸ್ ಮತ್ತು ಶ್ರೀ ಬಾಲಚಂದ್ರ, ಪ್ರಿನ್ಸಿಪಾಲ್ ಸಿಸ್ಟಮ್ ಅನಾಲಿಸ್ಟ್, ಮೈಸೂರು ರೀಜನಲ್ ರವರ ಸಮನ್ವಯದೊಂದಿಗೆ ಜಿಲ್ಲೆಯ NIC ಕೇಂದ್ರಗಳ D.I.O.ಗಳಿಗೆ ವಹಿಸಿರುತ್ತಾರೆ.

ರಾಜ್ಯದ NIC ಮೂಲಕ ತಂತ್ರಾಂಶ ತಯಾರಿಸುವಲ್ಲಿ ಮೈಸೂರಿನ NIC ಕೇಂದ್ರದ D.I.O. ಶ್ರೀ.ದೇವರಾಜು ಹಾಗೂ ಹಾಸನ NIC ಕೇಂದ್ರದ D.I.O. ಶ್ರೀ.ಪ್ರಶಾಂತ್‌ರವರು ಮತ್ತು ಶ್ರೀ.ರಘೆ, ಮೈಸೂರಿನ NIC ಕೇಂದ್ರದ A.D.I.O ರವರು ಪ್ರಾದೇಶಿಕ ಆಯುಕ್ತರ ಕಛೇರಿ ಹಾಗೂ NIC ನಡುವೆ ನಿರಂತರವಾಗಿ, ಸಮನ್ವಯ ಕಾರ್ಯನಿರ್ವಹಿಸಿದ್ದು, ಇವರ ಹೆಚ್ಚಿನ ಕಾರ್ಯತತ್ಪರತೆ ಈ ಯೋಜನೆ ಅನುಷ್ಠಾನಗೊಳಿಸಲು ಸಹಕಾರಿಯಾಗಿದ್ದಾರೆ. ಹೀಗೆ ತಯಾರಿಸಲ್ಪಟ್ಟ ನಮೂನೆಗಳನ್ನು ತಾಲ್ಲೂಕು ಕಚೇರಿ , ಉಪ ವಿಭಾಗಾಧಿಕಾರಿಗಳ ಕಚೇರಿ, ಜಿಲ್ಲಾಧಿಕಾರಿಗಳ ಕಚೇರಿಗಳಲ್ಲಿ ಈ ವಿಭಾಗದ ಜಿಲ್ಲೆಯ DIO ,NIC ಅವರುಗಳ ಮೂಲಕ ಅಳವಡಿಸುವ ವ್ಯವಸ್ಥೆಯನ್ನು ಮಾಡಲಾಯಿತು. ದಿ:24-1-2009 ರಂದು ನಡೆಸಿದ ವಿಭಾಗದ ಕಂದಾಯಾಧಿಕಾರಿಗಳ ಸಭೆಯಲ್ಲಿ R.M.I.S ನಲ್ಲಿ ಮಾಹಿತಿಗಳನ್ನು ನಮೂದು ಮಾಡಲು ಎಲ್ಲಾ ಅಧೀನಾಧಿಕಾರಿ ಗಳಿಗೆ/ಸಿಬ್ಬಂದಿ ಗಳಿಗೆ ಸೂಕ್ತ ಸೂಚನೆಗಳನ್ನು ನೀಡುವಂತೆ ಜಿಲ್ಲಾಧಿಕಾರಿಗಳಿಗೆ ತಿಳಿಸಲಾಯಿತು. R.M.I.S ಮಾಹಿತಿಯನ್ನು ಹಾಗೂ R.M.I.S ನಲ್ಲಿ ಒಳಗೊಂಡಿರುವ ಡಿ.ಸಿ.ಬಿ.ಯನ್ನು ನಮೂದು ಮಾಡುವ ತಾಲ್ಲೂಕುವಾರು ವೆಬ್‌ಸೈಟ್, ಪಾಸ್‌ವರ್ಡ್ ವಿವರಗಳನ್ನು ಜಿಲ್ಲಾಧಿಕಾರಿಗಳಿಗೆ ಕಳುಹಿಸಿಕೊಡಲಾಯಿತು. ಅಳವಡಿಸಿದ ನಮೂನೆಗಳ ವಿವರ ತಿಳಿದುಕೊಳ್ಳಲು ದಿ:27-1-2009 ಮತ್ತು 28-1-2009 ರಂದು ಆಯಾ ಜಿಲ್ಲಾ ಕೇಂದ್ರ ಸ್ಥಾನದಲ್ಲಿ ಜಿಲ್ಲಾಧಿಕಾರಿಗಳ, ಉಪ ವಿಭಾಗಾಧಿಕಾರಿಗಳ, ತಾಲ್ಲೂಕು ಕಚೇರಿಯಿಂದ ಒಬ್ಬರು ಸಿಬ್ಬಂದಿಗಳಿಗೆ ತರಬೇತಿ ನೀಡಲಾಗಿದೆ. ತರಬೇತಿ ನಂತರ ಸರಿಯಾದ ಮಾಹಿತಿ/ಡಾಟಾ ನಮೂದು ಮಾಡುತ್ತಿರುವ ಬಗ್ಗೆ ಖುದ್ದಾಗಿ ಪರಿಶೀಲಿಸಲು ಜಿಲ್ಲಾಧಿಕಾರಿಗಳ ಕಚೇರಿಯ ಕಚೇರಿ ಸಹಾಯಕರು/ಪುರಸಭಾ ತಹಶೀಲ್ದಾರ್‌ರವರನ್ನು ಸಹಾಯಕ ನೋಡಲ್ ಅಧಿಕಾರಿಗಳನ್ನಾಗಿ ಹಾಗೂ ಜಿಲ್ಲಾಧಿಕಾರಿಗಳ ಕೇಂದ್ರ ಸ್ಥಾನಿಕ ಸಹಾಯಕರನ್ನು ನೋಡಲ್ ಅಧಿಕಾರಿಗಳನ್ನಾಗಿ ನೇಮಿಸುವಂತೆ ಎಲ್ಲಾ ಜಿಲ್ಲಾಧಿಕಾರಿಗಳಿಗೆ ದಿ:19-1-2009 ರಂದು ಸೂಚನೆ ನೀಡಲಾಯಿತು. ದಿನಾಂಕ:7-2-2009ರಂದು ನಡೆಸಿದ ವಿಭಾಗಮಟ್ಟದ ಉಪ ವಿಭಾಗಾಧಿಕಾರಿಗಳ ಸಭೆಯಲ್ಲಿ RMIS ನಲ್ಲಿ ಕ್ರಮವಾಗಿ ಮಾಹಿತಿಗಳನ್ನು ಅಳವಡಿಸುವ ಕುರಿತು ಸೂಚನೆ ನೀಡಲಾಯಿತು. ಮತ್ತೆ ಜಿಲ್ಲಾಧಿಕಾರಿಗಳ, ಉಪ ವಿಭಾಗಾಧಿಕಾರಿಗಳ, ತಾಲ್ಲೂಕು ಕಚೇರಿಯ ಸಂಬಂಧಪಟ್ಟ ಪ್ರ.ದ.ಸ. ಮತ್ತು ದ್ವಿ.ದ.ಸ.ಗಳಿಗೆ ದಿ:9-2-2009 ಮತ್ತು 10-2-2009 ರಂದು ಜಿಲ್ಲೆಯ ಆಯಾ N.I.C ಕೇಂದ್ರಗಳಲ್ಲಿ ಡಾಟಾ ನಮೂದು ಮಾಡುವ ಕುರಿತು ತರಬೇತಿ ನೀಡಲಾಯಿತು.

ಆಯಾ ಕಚೇರಿಗಳಲ್ಲಿ ಡಾಟಾ ಎಂಟ್ರಿ ಮಾಡಿ, ವರದಿ ಪಡೆದಾಗ ಸರಿಯಾದ ಮಾಹಿತಿ ಪಡೆಯುವಲ್ಲಿ, ಹಾಗೂ ಡಾಟಾ ಎಂಟ್ರಿ ಮಾಡುವಲ್ಲಿ ಎದುರಿಸಿದ ಗೊಂದಲ/ಸಮಸ್ಯೆ ಕುರಿತು ಚರ್ಚಿಸಲು ದಿ:17-2-2009 ರಂದು ಜಿಲ್ಲಾಧಿಕಾರಿಗಳ ಕಚೇರಿಗಳ ಕಚೇರಿ ಸಹಾಯಕರು/ಮುನಿಸಿಪಲ್ ತಹಶೀಲ್ದಾರ್(ಸಹಾಯಕ ನೋಡಲ್ ಅಧಿಕಾರಿ )ಹಾಗೂ ಸಂಬಂಧಪಟ್ಟ ಕಚೇರಿ ಶೀರಸ್ತೇದಾರ್, ವಿಷಯ ನಿರ್ವಾಹಕರು, ಭೂಮಿ ಆಪರೇಟರ್‌ಗಳ ವಿಭಾಗಮಟ್ಟದ ತರಬೇತಿಯನ್ನು ಪ್ರಾದೇಶಿಕ ಆಯುಕ್ತರ ಅಧ್ಯಕ್ಷತೆಯಲ್ಲಿ ಹಮ್ಮಿಕೊಳ್ಳಲಾಯಿತು. ಈ ಕಾರ್ಯಾಗಾರದಲ್ಲಿ ಹಾಸನ, NIC ಯ DIO ಶ್ರೀ.ಪ್ರಶಾಂತ್ ಹಾಗೂ ಮೈಸೂರು NIC ಯ DIO ಶ್ರೀ.ದೇವರಾಜು ಸಹ ಹಾಜರಿದ್ದು, DCB ಮತ್ತು RMIS ತಂತ್ರಾಂಶದ ಡಾಟಾ ಅಳವಡಿಕೆ ಬಗ್ಗೆ ಪ್ರಾತ್ಯಕ್ಷಿಕೆ ನೀಡಿದರು. ಕಾರ್ಯಾಗಾರದಲ್ಲಿ ದೀರ್ಘವಾಗಿ ಚರ್ಚೆಯಾಗಿ ಕೆಲವು ನಮೂನೆಗಳನ್ನು ತಿದ್ದುಪಡಿ ಮಾಡಲು ತೀರ್ಮಾನಿಸಿದ ಆದಾರದ ಮೇಲೆ, ತಿದ್ದುಪಡಿಯಾಗಬೇಕಾದ ಪಟ್ಟಿಗಳನ್ನು ಬೆಂಗಳೂರು NICಯ ಡೆಪ್ಯೂಟಿ ಡೈರೆಕ್ಟರ್ ಜನರಲ್ ಹಾಗೂ S.I.O.ರವರಿಗೆ ಕಳುಹಿಸಿಕೊಡಲಾಯಿತು.

ದಿನಾಂಕ:4-3-2009 ರಂದು ಪ್ರಾದೇಶಿಕ ಆಯುಕ್ತರ ಕಚೇರಿಯಲ್ಲಿ ನಡೆದ ಜಿಲ್ಲಾಧಿಕಾರಿಗಳ ಕೇಂದ್ರಸ್ಥಾನಿಕ ಸಹಾಯಕರುಗಳ ಸಭೆಯಲ್ಲಿ RMIS ನಲ್ಲಿ ಮಾಹಿತಿಗಳನ್ನು ಅಳವಡಿಸಲಾಗಿರುವ ಪ್ರಗತಿ ಕುರಿತು ಪರಿಶೀಲನೆ ನಡೆಸಲಾಯಿತು.